ವಿಷಯ : ವಿಜಾಪುರ ಜಿಲ್ಲೆಯಲ್ಲಿ ಕೈಗಾರಿಕೆಗೆ ಪ್ರೋತ್ಸಾಹ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 737 (1237)

ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ವಿಜಾಪುರ ಜಿಲ್ಲೆಯ ಕೈಗಾರಿಕೆಯಲ್ಲಿ ಅತಿ ಹಿಂದುಳಿದ ಪ್ರದೇಶವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ. ಗಮನಕ್ಕೆ ಬಂದಿದ್ದಲ್ಲಿ ಸರ್ಕಾರ ಈ ಪ್ರದೇಶದ ಬಗ್ಗೆ ಕೈಗೊಂಡ ಪರಿಹಾರಗಳೇನು ?

ಇ. ಈ ಪ್ರದೇಶದಲ್ಲಿ ಕೈಗಾರಿಕೆಯನ್ನು ಪ್ರೋತ್ಸಾಹಿಸುವುದಕ್ಕೆ ಕೈಗೊಂಡ ಕ್ರಮಗಳೇನು ?

ಶ್ರೀ ಆರ್. ವಿ. ದೇಶಪಾಂಡೆ : (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ. ಹೌದು

1. ಕೆಐಎಡಿಬಿ, ಬೆಂಗಳೂರು ಇವರು ಮಹಾಲಬಗಾಯತ್ ವಿಜಾಪುರದಲ್ಲಿ 150 ಎಕರೆ ಮತ್ತು ಜಮಖಂಡಿ ತಾಲ್ಲೂಕಿನ ಅಸಂಗಿ ಗ್ರಾಮದಲ್ಲಿ 90 ಎಕರೆ ಭೂಮಿಯನ್ನು ಅಭಿವೃದ್ಧಿ ಪಡೆದಿದ್ದು ಕೈಗಾರಿಕೆ ಘಟಕಗಳನ್ನು ಪ್ರಾರಂಭಿಸಲಿಚ್ಚಿಸುವವರಿಗೆ ಭೂಮಿಯನ್ನು ಹಂಚಿಕೆ ಮಾಡಲಾಗುತ್ತದೆ.

2. ಕೆಎಸ್ಎಸ್ಐಡಿಸಿ ಲಿಮಿಟ್ಡ್ ಬೆಂಗಳೂರು ಇವರು ವಿಜಾಪುರ, ಬಾಗಲಕೋಟೆ ಮತ್ತು ಜಮಖಂಡಿಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ನಿರ್ಮಿಸಿದ್ದು, ಕ್ರಮವಾಗಿ 46, 36 ಮತ್ತು 16 ಫೆಡ್‌ಗಳನ್ನು ನಿರ್ಮಿಸಿದ್ದು, ಎಲ್ಲಾ ಷೆಡ್‌ಗಳನ್ನು ಕೈಗಾರಿಕೋದ್ಯಮಿಗಳಿಗೆ ಹಂಚಲಾಗಿದೆ. ಮಹಾಲಬಾಗಾಯತ್ ವಿಜಾಪುರದಲ್ಲಿ 8 ಮುಧೋಳ - 4 ಮುದ್ದೆಬಿಹಾಳ -4 ಮತ್ತು ಬನಹಟ್ಟಿಗಳಲ್ಲಿ -4 ಕೈಗಾರಿಕಾ ಷೆಡ್‌ಗಳನ್ನು ನಿರ್ಮಿಸಲಾಗುತ್ತಿದೆ.

3. ಕೆಐಎಡಿಬಿ ಹಾಗೂ ಕೆಇಬಿ - ಯ ವತಿಯಿಂದ ಮಹಾಲಬಾಗಾಯತ್ ವಿಜಾಪುರದಲ್ಲಿ 110 ಕೆವಿಎ ಪವರ್ ಸ್ಟೇಷನ್ ಸ್ಥಾಪಿಸಲಾಗುತ್ತದೆ.

4. ಕೈಗಾರಿಕೆಗಳನ್ನು ಸ್ಥಾಪಿಸಲು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಏಕಗವಾಕ್ಷಿ ಏಜೆನ್ಸಿಗಳು ಕಾರ್ಯ ನಿರ್ವಹಿಸುತ್ತಿದ್ದು, ಸಣ್ಣ ಕೈಗಾರಿಕೆಗಳಿಗೆ 2 ಎಕರೆಗಳವರೆಗೆ ಜಮೀನು 250 ಕೆವಿಎ ವರೆಗೆ ವಿದ್ಯುತ್ ನೀಡುವ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಘಟಕದವರಿಗೆ ರಿಯಾಯಿತಿ ಮತ್ತು ಪ್ರೋತ್ಸಾಹಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಸಹ ಹೊಂದಿದೆ.

5. 1994-95ನೇ ಸಾಲಿನಲ್ಲಿ ಒಟ್ಟು 8 ಸಭೆಗಳನ್ನು ಜರುಗಿಸಿ 17 ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ರು 69.14 ಲಕ್ಷ ಸಹಾಯ ಧನ ಮಂಜೂರು ಮಾಡಲಾಗಿದೆ 16 ಘಟಕಗಳಿಗೆ. 14.20 ಎಕರೆ ಜಮಿನು ಹಂಚಿಕೆ ಮಾಡಲಾಗಿದೆ. 14 ಘಟಕಗಳಿಗೆ 448 ಹೆಚ್.ಪಿ. ವಿದ್ಯುತ್ ಮುಂಜೂರು ಮಾಡಲಾಗಿದೆ. 6 ಘಟಕಗಳಿಗೆ ಕೈಗಾರಿಕಾ ವಸಾಹತುಗಳಲ್ಲಿ ಮಳಿಗೆ ಹಂಚಿಕೆ

ಮಾಡಲಾಗಿದೆ. ಜಿಲ್ಲೆಯಲ್ಲಿ ಒಟ್ಟು 5448 ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳನ್ನು ನೋಂದಾಯಿಸಲಾಗಿದ್ದು, ರೂ. 3277.44 ಲಕ್ಷ ಬಂಡವಾಳ ಹೂಡಲಾಗಿದೆ. ಜಿಲ್ಲೆಯಲ್ಲಿ ಒಟ್ಟು 14 ಮಧ್ಯಮ ಮತ್ತು ಬಾರಿ ಪ್ರಮಾಣದ ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತಿವೆ. ಇದು ಹಿಂದುಳಿದ ಜಿಲ್ಲೆಯಾದುದರಿಂದ ವಲಯ-11ಕ್ಕೆ ಲಭ್ಯವಿರುವ ಎಲ್ಲಾ ಸೌಲತ್ತುಗಳು ಲಭ್ಯವಿದೆ. ಉದ್ದಿಮೆದಾರರನ್ನು ಪ್ರೋತ್ಸಾಹಿಸುವ ಸಲುವಾಗಿ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ.

6. ಉನ್ನತ ಮಟ್ಟದ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾ ಸಮಿತಿ ಸಭೆಗಳಿಂದ 7 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಈ 7 ಘಟಕಗಳಲ್ಲಿ 20833.75 ಲಕ್ಷ ರೂಪಾಯಿಗಳ ಬಂಡವಾಳ ಹೂಡುವ ಉದ್ದೇಶವಿದ್ದು, 1977 ಮಂದಿಗೆ ಉದ್ಯೋಗವಕಾಶ ಕಲ್ಪಿಸುವ ಯೋಜನೆಯಿದೆ.

ವಿಷಯ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಉತ್ತರ ಕರ್ನಾಟಕ ಭಾಗಕ್ಕೆ ಖರ್ಚು ಮಾಡಿದ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 738 (882)

ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡಿದ ವಾರ್ಷಿಕ ವೆಚ್ಚವೆಷ್ಟು

ಆ. ಅದರಲ್ಲಿ ಉತ್ತರ ಕರ್ನಾಟಕ ಭಾಗಕ್ಕೆ ಮಾಡಿದ ಖರ್ಚು ಎಷ್ಟು

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ಕನ್ನಡ ಮತ್ತು ಸಂಸ್ಕೃತಿ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು):

ಅ. ಅನುಬಂಧ 1ರಲ್ಲಿ ನೀಡಲಾಗಿದೆ.

ಆ. ಅನುಬಂಧ 2ರಲ್ಲಿ ನೀಡಲಾಗಿದೆ.

ಅ ನು ಬಂ ಧ - 1

1994-95ನೇ ಸಾಲಿನಲ್ಲಿ ರಾಜ್ಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡಿದ ವಾರ್ಷಿಕ ವೆಚ್ಚದ ವಿವರಗಳು

(ರೂ .ಗಳಲ್ಲಿ)

	ಯೋಜನೆ	ಯೋಜನೇತರ	ಒಟ್ಟು
ಕನ್ನಡ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ	4,01,64,000-00	4,25.94,000-00	8,27,58,000-00